ಸಂಪಾದಕ ಮಂಡಳಿ

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.
-ಸಂ.

ಚಿಂತನ

ಮಾನವನಾಗಿ ಹುಟ್ಟಿದ ಮೇಲೆ ಏನಾದರೊಂದು 'ಸಾಧನೆ' ಮಾಡುವುದು ಬಹಳ ಅಗತ್ಯ. ಈ ಸಾಧನೆಯಿಂದ ಆತನು ಸಮಾಜದಲ್ಲಿ ಗುರುತಿಸಲ್ಪಡುತ್ತಾನೆ. ಅಲ್ಲದೆ ಆತನ ಕಾಲಾನಂತರವೂ ಆತನ ಈ ಸಾಧನೆಯ ಕೀರ್ತಿ ಉಳಿಯಬಹುದು.

'ಸಾಧನೆ'ಯನ್ನು ಸಾಧಿಸಲು ಸತತ ಪರಿಶ್ರಮ, ಜ್ಞಾನ ಸಂಪಾದನೆ ಬಹಳ ಅಗತ್ಯ ಪರಿಶ್ರಮವನ್ನೇ ಹಿಂದೆ ಋಷಿಮುನಿಗಳು, ರಾಜಾಧಿರಾಜರು ಗೈದಾಗ ಅದನ್ನು ತಪಸ್ಸು ಎಂದು ಕರೆಯಲಾಯಿತು. ಇಂತಹ ತಪಸ್ಸಿನ ಸಫಲತೆ ಎಂದರೆ ಸಾಧನೆಯ ಪರಮಾವಧಿ ಎಂದು ತಿಳಿಯಬೇಕು.

ಒಬ್ಬ ವಿಜ್ಞಾನಿ ಶ್ರೇಷ್ಠ ವೈದ್ಯ, ಹೆಸರಾಂತ ಗಾಯಕ, ಗಮನೀಯ ನಟ, ಚತುರ ಶಿಲ್ಪಿ ಪರಿಣತ ಮಂತ್ರಿ, ಘನ ಪಂಡಿತ ಎನಿಸಿಕೊಳ್ಳಲು ಆತನು ಅವಿರತ ದುಡಿಮೆ, ಅಧ್ಯಯನಗಳ ಮೂಲಕ ಅದರಲ್ಲಿ ಹಿಡಿತವನ್ನು ಸಾಧಿಸಲು ಪ್ರಯತ್ನಿಸುವುದು-ಎಂದರೆ ತಪವನ್ನಾಚರಿಸುವುದು ತಿಳಿಯಬೇಕು. ಈ ಸಾಧನೆಗೆ ಒಂದೆರಡು ದಿನ, ಒಂದೆರಡು ವರ್ಷ ಸಾಲದು. ಅನೇಕ ವರ್ಷಗಳ ಕಾಲ ಅದರಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಬೇಕು. ಆಗಲೇ ಮಾಗಿದ ಹಣ್ಣಿನಂತೆ ಪಕ್ವಬುದ್ಧಿಯ ಮಾನವನ ನಿರ್ಮಾಣವಾಗುವುದು. ಆದ್ದರಿಂದ ಸಾಧನೆಯ ತುದಿಗೆ ಏರಲು ಬಹಳ ಕಷ್ಟ ಪಡಬೇಕು.

ಎಷ್ಟೇ ಘನ ವ್ಯಕ್ತಿತ್ವ ಉಳ್ಳ ವ್ಯಕ್ತಿಯಾದರೂ ತನ್ನ ಮೇರುಸ್ಥಾನದಿಂದ ಕೆಳಗೆ ಬೀಳುವುದು ಬಲು ಸುಲಭ. ತನ್ನ ಕೆಟ್ಟ ನಡತೆ ಮೊದಲಾದವುಗಳಿಂದ ಕೇವಲ ಒಂದೇ ದಿನದಲ್ಲಿ ಕೆಳಕ್ಕೆ ಜಾರುವುದು ಸಾಧ್ಯ. ಎಂದರೆ ಮಡಕೆ ಮಾಡುವುದು ಕಷ್ಟ ಒಡೆಯುವುದು ನಿಮಿಷದ ಕೆಲಸ, ಮನೆ ಕಟ್ಟುವುದು ಕಷ್ಟ ಮನೆ ಕೆಡಹುವುದು ಸುಲಭ, ಹಣ ಸಂಪಾದಿಸುವುದು ಕಷ್ಟ ಅದೇ ಸಂಗ್ರಹವಾದ ಹಣವನ್ನು ಒಂದೇ ಕ್ಷಣದಲ್ಲಿ ಖರ್ಚು ಮಾಡುವುದು ಸುಲಭ. ಅದೇ ರೀತಿ ಸಾಧನೆಯ ಮೇರು ಪರ್ವತವೇರುವುದು ಬಲು ಕಷ್ಟ ಕೇವಲ ಒಂದು ದಿನದಲ್ಲಿ ಒಂದು ಕೆಟ್ಟ ಘಟನೆ ನಡದರೂ ಅವನು ಅಪಕೀರ್ತಿಗೆ ಪಾತ್ರನಾಗುತ್ತಾನೆ.

ಆದರಿಂದ 'ಸಾಧನೆ'ಯ ತುದಿಗೆ ಏರಲು ಶ್ರಮಪಡಬೇಕು. ಹಾಗೆಯೇ ಅಪಕೀರ್ತಿಗೆ ಪಾತ್ರರಾಗದಂತಾಗಲು ನಮ್ಮಲ್ಲಿ ಸಚ್ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು.

ಪೂರ್ಣಾವತಾರೀ ಶ್ರೀಕೃಷ್ಣ

- ಮ.ನಾ.ಹೆಬ್ಬಾರ

(ಹಿಂದಿನ ಸಂಚಿಕೆಯಿಂದ)

..... ಶ್ರೀ ಕೃಷ್ಣನನ್ನು ನಾವು ದೇವರೆಂದು ನಂಬಿ ಪೂಜಿಸಿದರೂ ಅವನು ಮಾತ್ರ ತಾನು ದೇವರಲ್ಲವೆಂದೂ, ತಾನು ಯಾವ ದೈವೀಕೃತ್ಯವನ್ನು ಮಾಡಲಿಲ್ಲವೆಂದೂ ಪುರುಷಾಕಾರದಿಂದ ಮಾಡಬಹುದಾದಷ್ಟನ್ನೇ ಮಾಡಿದೆನೆಂದೂ ಹೇಳಿದ್ದಾನೆ.

''ಅಹಂಹಿ ತತ್ಕರಿಷ್ಯಾಮಿ ಪರಂ ಪುರುಷಕಾರತಃ
ದೈವಂತುಸಮಯಾಶಕ್ಯಂ ಕರ್ಮಕರ್ತುಂ ಕಥಂಚನ''

ಇವನ ಹಲವು ಆಯುಧಗಳು ದೇವತೆಗಳ ಅನುಗ್ರಹದಿಂದ ಲಭಿಸಿದುವು. ವರುಣ ಮತ್ತು ಅಗ್ನಿಯಿಂದ ಕ್ರಮವಾಗಿ ಗದೆ ಮತ್ತು ಚಕ್ರಗಳನ್ನು ಪಡೆದನು. ನರಕಾಸುರನು ಶ್ರೀ ಕೃಷ್ಣನಿಂದ ವಧಿಸಲ್ಪಟ್ಟುದರಿಂದ ಅದಿತಿಯ ಕರ್ಣಕುಂಡಲಗಳು ಲಭಿಸಿದುವು. ಇವುಗಳಿಂದಾಗಿ ಕೃಷ್ಣನು ರಕ್ಷಸ ಸಂಹಾರ ಮಾಡಲು ಸಾಧ್ಯವಾಯಿತು. ಧರ್ಮರಾಯನ ರಾಜಸೂಯಯಾಗದಲ್ಲಿ ಭೀಷ್ಮರ ಅಭಿಮತದಂತೆ ಕೃಷ್ಣನಿಗೆ ಅಗ್ರಪೂಜೆಯು ಸಂದಾಗ ಚೇದಿರಾಜ ಶಿಶುಪಾಲನು ಅವನನ್ನು ನಿಂದಿಸತೊಡಗಿದನು. ಇಲ್ಲಿಯೂ ತಾನು ಕೊಟ್ಟ ಮಾತಿನಂತೆ ಶಿಶುಪಾಲನ ನೂರು ಅಪರಾಧಗಳನ್ನು ಕ್ಷಮಿಸಿ, ಅನಂತರವೇ ಅವನನ್ನು ತನ್ನ ಚಕ್ರದಿಂದ ವಧಿಸಿದನು. ಪಾಂಡವರ ಶಾಂತಿದೂತನಾಗಿ ಕೌರವನಲ್ಲಿಗೆ ಸಂಧಾನಕ್ಕೆ ರಾಜಕಾರಣಿಯಾಗಿ ಹೋಗಿ, ಕೌರವನು ತನ್ನನ್ನು ಬಂಧಿಸಲು ಬಂದಾಗ ಎಲ್ಲೆಲ್ಲೂ ಕಾಣಿಸಿಕೊಂಡನು. ಪೌಂಡ್ರಕ ವಾಸುದೇವನು ಕೃಷ್ಣನನ್ನು ಅವತಾರಿಯೆಂದು ಒಪ್ಪದೆ ಅವನೊಡನೆ ಯುದ್ಧ ಹೂಡಿದಾಗ ಅವನನ್ನು ನಿಗ್ರಹಿಸಿದನು. ಜರಾಸಂಧನು ಹದಿನೆಂಟು ಬಾರಿ ಮಥುರೆಗೆ ಮುತ್ತಿಗೆ ಹಾಕಲು ಮಥುರೆಯನ್ನೇ ತೊರೆದು, ಸಾಗರ ಮಧ್ಯದಲ್ಲಿ ದ್ವಾರಕೆಯನ್ನು ನಿರ್ಮಿಸಿ ಅಲ್ಲಿ ನೆಲೆಯಾದನು. ಕೃಷ್ಣನು ಅವತಾರ ಮುಗಿಸಿದಾಗ ದ್ವಾರಕೆಯು ಸಮುದ್ರದಲ್ಲಿ ಮುಳುಗಿ ಹೋಗಿದ್ದು, ಈಗಲೂ ಅಲ್ಲಿನ ಸಾಗರದಾಳದಲ್ಲಿ ದ್ವಾರಕೆಯ ಕುರುಹುಗಳಿವೆ.

ಮಹಾಭಾರತಕ್ಕಿಂತ ಮುಂಚೆ ಕೃಷ್ಣನ ಪ್ರಸ್ತಾಪ ಬರುತ್ತದೆಯಾದರೂ ಅದು ಅತ್ಯಲ್ಪ. ಛಾಂದೋಗ್ಯೋಪನಿಷತ್ತಿನಲ್ಲಿ ಕೃಷ್ಣನು ಘೋರ ಆಂಗೀರಸನೆಂಬ ಗುರುವಿನಲ್ಲಿ ಒಂದು ರಹಸ್ಯ ವಿದ್ಯೆಯನ್ನು ಕಲಿತನೆಂದು ಹೇಳಿದೆ. ಋಗ್ವೇದದಲ್ಲಿಯೂ ಒಬ್ಬ ಮಂತ್ರದ್ರಷ್ಟನಾದ ಕೃಷ್ಣನ ಪ್ರಸ್ತಾಪವಿದೆ. ಉಪನಿಷತ್‌ಗಳ ಕೃಷ್ಣನೂ ಮಹಾಭಾರತದ ಕೃಷ್ಣನೂ ಬೇರೆ ಬೇರೆ ಎಂದು ಕೆಲವರ ಅಭಿಪ್ರಾಯವಿದೆ. ಇಬ್ಬರೂ ಒಬ್ಬನೇ ಎಂದು ಕೆಲವರ ಅಭಿಪ್ರಾಯವಿದೆ. ಇಬ್ಬರೂ ಒಬ್ಬನೇ ಎಂದು ಕೆಲವರೆನ್ನುತ್ತಾರೆ. ಇಲ್ಲಿ ಈ ವಾದವು ಪ್ರಾಮುಖ್ಯವಲ್ಲ. ಕೃಷ್ಣನು ಮತಾಚಾರ್ಯನೆಂದೂ, ಸಮಾಜ ಸುಧಾರಕನೆಂದೂ ಒಪ್ಪಿಕೊಳ್ಳ ಬಹುದಾಗಿದೆ. ಕೃಷ್ಣನು ಅವತಾರಿಯೇ ಅಲ್ಲ; ಅವನೊಬ್ಬ ಸಾಮಾನ್ಯ ಪುರುಷನಾಗಿದ್ದು ಸಮಾಜ ಸುಧಾರಕ ಎಂಬ ಒಂದು ವಾದವೂ ಇದೆ. ಆದರೆ ನಮಗಿಲ್ಲಿ ಅದು ಪ್ರಸ್ತುತವಲ್ಲ; ಕೃಷ್ಣನ ಪೂರ್ಣಾವತಾರದ ಬಗೆಗಿನ ವಿವರಣೆ. ವಿಷ್ಣುವಿನ ಅವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ-ಇತ್ಯಾದಿಗಳೆಲ್ಲವೂ ನಿರ್ದಿಷ್ಟ ಉದ್ದೇಶದಿಂದ ಆದುದುಗಳು. ರಕ್ಕಸರಿಂದ ಕದ್ದೊಯ್ಯಲ್ಪಟ್ಟವೇದಗಳನ್ನು ತರಲು ಮತ್ಸ್ಯನಾಗಿ ಜನಿಸಿದ ವಿಷ್ಣುವು ವೇದಗಳನ್ನು ತಂದು ವೈದಸ್ವತನ ಕೈಗಿತ್ತು ಅಂತರ್ಧಾನನಾದನು. ಸಮುದ್ರ ಮಥನದ ಸಮಯದಲ್ಲಿ ಮುಳುಗಿದ ಮಂದರಗಿರಿಯನ್ನು ಮೇಲಕ್ಕೇರಲು ಕೂರ್ಮನಾದ ವಿಷ್ಣುವು ಸಮುದ್ರ ಮಥನ ಮುಗಿಸಿದಾಗ ಮೋಹಿನಿಯಾಗಿ ಅಮೃತವನ್ನು ಹಂಚಿದ ವರಾಹಾವತಾರದಿಂದ ಹಿರಣ್ಯಾಕ್ಷ ಸಂಹಾರ, ನೃಸಿಂಹಾವತಾರದಿಂದ ಹಿರಣ್ಯಕಶ್ಯಪು ವಧೆ; ವಾಮನ ಮತ್ತು ತ್ರಿವಿಕ್ರಮನಾಗಿ ಬಲಿಯ ಗರ್ವಾಪಹಾರ, ಪರಶುರಾಮನಾಗಿ ಕಾರ್ತವೀರ್ಯನೇ ಮೊದಲಾದ ದುಷ್ಟ ಕ್ಷತ್ರಿಯರ ನಾಶ; ಶ್ರೀ ರಾಮನಾಗಿ ರಾವಣಾದಿಗಳ ನಿರ್ನಾಮ - ಇತ್ಯಾದಿ ನಿರ್ದಿಷ್ಟ ಕಾರಣಕ್ಕಾಗಿ ವಿಷ್ಣುವಿನ ಅವತಾರವಾಯಿತು. ಆದರೆ 'ಲೀಲಾ ಆಮನುಷ ವೇಷಧಾರಿ', 'ಕಪಟ ನಾಟಕ ಸೂತ್ರಧಾರಿ',

(3ನೇ ಪುಟಕ್ಕೆ ...)

ಅನುಭವ.....

- ಡಾ। ವೈ, ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಉಡುಪಿ

ಆತ್ಮಾನುಭವವೆಂದರೆ ನಮ್ಮೊಳಗೆ ಅರಿವನ್ನುಂಟುಮಾಡುವ ಒಂದು ಅನುಭವ. ಈ ಅರಿವು ಬೇರೆ, ಬೆಳಕು ಬೇರೆ ಅನುಭವ ಬೇರೆ ಬೇರೆ ಅಲ್ಲ. ಅವುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಅದು ಭೌತಿಕ ಬೆಳಕಲ್ಲ ಎಂಬುವುದರಲ್ಲಿ ವಾದವಿಲ್ಲ. ಅರಿವು ಎನ್ನುವುದು ಯಾಂತ್ರಿಕವೂ ಅಲ್ಲ; ನಿರಂತರ ರಾಸಾಯನಿಕ ವಸ್ತುಗಳ ಪೂರೈಕೆ ಮತ್ತು ರಾಸಾಯನಿಕ ಬದಲಾವಣೆಗಳ ಪರಿಣಾಮವೂ ಅಲ್ಲ. ಇನ್ನೊಬ್ಬನ ಪ್ರೀತಿಗೆ, ಮಾತಿಗೆ, ವಿಶ್ವಾಸಕ್ಕೆ, ಗೌರವಕ್ಕೆ ನಾವು ಸ್ಪಂದಿಸುವಾಗ ಅಲ್ಲಿ ರಾಸಾಯನಿಕದ ಪೂರೈಕೆಯೂ ಇಲ್ಲ. ಅಂದ ಮೇಲೆ ಅದೊಂದು ರಾಸಾಯನಿಕ ಬದಲಾವಣೆಯ ಪರಿಣಾಮವೂ ಅಲ್ಲವೆಂದು ಸ್ಪಷ್ಟವಾಗುತ್ತದೆ.

ನಮ್ಮ ಮೆದುಳಿನ ಅರಿವಿನ ಕೇಂದ್ರಗಳು ವಿದ್ಯುತ್ತಿನ ತರಂಗಗಳಂತೆ ವರ್ತಿಸುತ್ತವೆ. ಆ ತರಂಗಗಳನ್ನು ವಿಜ್ಞಾನಿಗಳು ದಾಖಲಿಸಲೂ ಶಕ್ತರಾಗಿರುತ್ತಾರೆ.

ಹೊರಗಿನ ಪ್ರಾಪಂಚಿಕ ವೃತ್ತಿಗಳು ನರವಾಹಕಗಳಲ್ಲಿ ಹರಿದು (impulse) ಮಿದುಳಿನ ಕೇಂದ್ರವನ್ನು ತಲುಪುತ್ತವೆ, ಆ ವೃತ್ತಿಗಳನ್ನು ಕೇಂದ್ರವು ಅರ್ಥೈಸುತ್ತದೆ.

ವೃತ್ತಿಗಳು ನರಗಳಲ್ಲಿ ಹರಿಯುವಂತಹ ರೂಪಾಂತರ ಹೇಗೆ ಪಡೆಯುತ್ತವೆ?. ಹಾಗೆ ಹರಿಯುವ ವೃತ್ತಿಗಳನ್ನು ನರ ಕೇಂದ್ರವು ಹೇಗೆ ಅರ್ಥಮಾಡಿಕೊಳ್ಳುತ್ತದೆ? ಈ ಅರ್ಥ, ಅರಿವು ಎಂದರೆ ಏನು? ಅದು ಒಂದು ಭೌತಿಕ ವಸ್ತು ಖಂಡಿತ ಅಲ್ಲ. ಮತ್ತೇನು? ಹಾಗೆ ಅರ್ಥಮಾಡಿಕೊಳ್ಳುವ ವಸ್ತುವೇ ಆತ್ಮ ಆದುದರಿಂದಲೇ ಆತ್ಮವು ವಸ್ತು ತಂತ್ರ.

ಪ್ರಕಾಶಮಾನವಾದ ಭೌತಿಕ ಬೆಳಕನ್ನು ನೀಡುವ ಬಲ್ಬನ್ನು ಕಂಡು ಹುಡುಕುವ ಮುಂಚೆ ಆ ಬೆಳಕನ್ನು ಅನುಮಾನಿಸಿ ಯಾಕೆ ಹೇಗೆ ಕಂಡು ಹುಡುಕಿದರು? ಹರಿಯುವ ನೀರಿನಿಂದ ವಿದ್ಯುತ್ತನ್ನು ಯಾಕೆ ಹೇಗೆ ಕಂಡು ಹುಡುಕಿದರು? ಆ ವಿದ್ಯುತ್ತನ್ನು ಅನುಮಾನಿಸಿ ಸರಿಗೆಗಳಲ್ಲಿ ಪ್ರವಹಿಸಿ ನಮಗೆ ಬೇಕಾದಂತೆ ಉಪಯೋಗಿಸಲು ಹೇಗೆ ಮತ್ತು ಯಾಕೆ ಶಕ್ತರಾದರು? ಹೀಗೆ ಪ್ರವಹಿಸುವ ವಿದ್ಯುತ್ತಿನ ಇತಿಮಿತಿಗಳನ್ನು ಅರ್ಥೈಸಿ, ಅದೊಂದು ಬೆಳಕಿನ ರೂಪವೆಂದು ಯಾಕೆ ನಿರ್ಣೈಸಿದರು? ವಿದ್ಯುತ್ ಶಕ್ತಿ ಬಲ್ಬಿನಲ್ಲಿ ಬೆಳಕಾಗಿ ಕಾಣುವ ಮುಂಚೆ ''ವಿದ್ಯುತ್ ಒಂದು ಬೆಳಕೆಂದು ಒಂದು ವೇಳೆ ಆಕಸ್ಮಿಕವಾದರೂ ಯಾರಿಗೆ ಹೇಗೆ ಯಾಕೆ ತಿಳಿಯಿತು?. ವಿದ್ಯುತ್ತೆಂದರೆ ಬೆಳಕೇ ಎಂಬ ಅನುಭವವಾಗದೇ, ಅರಿವಾಗದೇ ಆ ಶಕ್ತಿಯಿಂದ ಬೆಳಕನ್ನು ಯಾರಾದರೂ ಯಾಕಾದರೂ ಪಡೆಯುವ ಪ್ರಯತ್ನ ಮಾಡಬೇಕು? ಅದು ಬೆಳಕೇ ಎಂಬ ಖಂಡಿತ ಅನುಭವವೊಂದು ಒಬ್ಬನಿಗೆ ಉಂಟಾಗದೆ ಅವನು ಆ ಬೆಳಕಿಗಾಗಿ ಅದನ್ನು ಭೌತಿಕ ರೂಪದಲ್ಲಿ ಕಾಣುವುದಕ್ಕಾಗಿ ಅನವರತ ಯಾಕೆ ಪ್ರಯತ್ನ ಮಾಡಬೇಕು? ಬಲ್ಬನ್ನು ಯಾಕೆ ಕಂಡು ಹಿಡಿಯಬೇಕು? ಆ ಬಲ್ಬಿನಲ್ಲಿ ವಿದ್ಯುತ್ ಹರಿಯಿಸಿ ಬೆಳಕನ್ನು ಯಾಕೆ ಪಡೆಯಬೇಕು? ನಿರಾಕಾರವಾಗಿ ಪ್ರವಹಿಸುವ ವಿದ್ಯುತ್ ಯಾಕೆ ಹೇಗೆ ಬೆಳಕಾಗಿ ಕಂಡಿತು? ಖಂಡಿತ ಸಾಧಿಸಿಯೇ ಸಾಧಿಸುತ್ತೇನೆಂದುಕೊಂಡು ಆ ವ್ಯವಸ್ಥೆಯ ಮೊತ್ತಮೊದಲ ಅನುಮಾನ, ಅನುಭವ ಹೇಗೆ ಉಂಟಾಯಿತು?

(ಮುಂದಿನ ಸಂಚಿಕೆಯಲ್ಲಿ....)

ಹೊಸ ಬೆಳಕು

ನಲ್ನುಡಿ :

ಭದ್ರಂ ಕರ್ಣೇಭಿಃ ಶೃಣಯಾಮ ದೇವಾ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।

ಅಂದರೆ ಓ ದೇವರೇ, ನಾವು ಕೇವಲ ಮಂಗಳಕರವಾದದ್ದನ್ನು ಕೇಳುವಂತಾಗಲಿ. ಓ ಪೂಜ್ಯನೇ, ಮಂಗಳಕರವಾದದ್ದು ಮಾತ್ರ ನಮ್ಮ ದೃಷ್ಟಿಗೆ ಬೀಳುವಂತಾಗಲಿ.

ಪುಸ್ತಕ ಪರಿಚಯ :

ಕಬರ್ಗತ್ತಲೆ - ಕಾತ್ಯಾಯಿನಿ ಕುಂಜಿಬೆಟ್ಟು

ಕಬರ್ಗತ್ತಲೆ ಎಂಬ ಈ ತುಳು ಕಾದಂಬರಿ ತುಳುಕೂಟ (ರಿ.) ಉಡುಪಿ, ಎಸ್.ಯು. ಪಣಿಯಾಡಿ ಪ್ರಶಸ್ತಿ ಪಡೆದಿದೆ. ಪುಸ್ತಕದ ಮುನ್ನುಡಿಯಲ್ಲಿ ಗುರುರಾಜ ಮಾರ್ಪಳ್ಳಿ ಯವರು ಹೇಳಿದಂತೆ ''ಕಾತ್ಯಾಯಿನಿ ಕುಂಜಿಬೆಟ್ಟು ತುಳು ಭಾಷೆಡ್ ಪೊಸರೀತಿದ ಪ್ರಯೋಗಡ್ ಬೈದಿನ ಈ ಕಾದಂಬರಿ, ತುಳುಕೂಟ ಉಡುಪಿದ ಕಾದಂಬರಿ ಸ್ಪರ್ಧೆಡ್ ಬಹುಮಾನ ಪಡೆಯಿನ ಈ ಸಂದರ್ಭೊಡ್ ಕಾತ್ಯಾಯಿನಿಗ್ ಎನ್ನ ಅಭಿನಂದನೆಲು. ಕಾತ್ಯಾಯಿನಿನ ಬರೆವುನ ಶಕ್ತಿ ಬುಲೆದ್ ತುಳು ಭಾಷೆಗ್ ನನ್ನಲ ಅರ್ಥಪೂರ್ಣಕೃತಿ ಕೊರ್ಪಿನಲಕ್ಕ ಆವಡ್‌ಂದ್ ಯಾನ್ ಬಯಸ್‌ವೆ''.

ಈ ಕಾದಂಬರಿಗೆ ಡಾ। ಗಣನಾಥ ಎಕ್ಕಾರು ಬೆನ್ನುಡಿ ಬರೆದಿದ್ದಾರೆ. ಕೆಲವು ಸಾಲುಗಳು ಹೀಗಿವೆ - 'ಕಬರ್ಗತ್ತಲೆ ಪನ್ಪಿ ಅರ್ಥವಂತಿಗೆದ ಪುದರ್‌ಡ್ ಶ್ರೀಮತಿ ಕಾತ್ಯಾಯಿನಿ ಕುಂಜಿಬೆಟ್ಟು ಬರೆಯಿ ಕಾದಂಬರಿ ಪೊರ್ಲುಕಂಟುಂಡು. ಓದಾವೊಂದ್ ಪೋಪಿನ, ಓದುನಕ್‌ಲೆನ್ ಚಿಂತನೆ ಪಲ್ವುನಂಚಿ ಪಲ್ವುನ ಶಕ್ತಿ ಈ ಕಾದಂಬರಿಗುಂಡು'.

ಶ್ರೀ ತ್ರಿಪುರಸುಂದರೀ ವಿಜಯಸ್ತವಃ -
ಕೋಲ್ಪೆ ಶ್ರೀ ಗೋಪಾಲಕೃಷ್ಣರಾವ್, ಕಡಬ

ಕೆನರಾ ಬ್ಯಾಂಕಿನಲ್ಲಿ 39 ವರ್ಷ ಸೇವೆ ಸಲ್ಲಿಸಿರುವ ಕೋಲ್ಪೆ ಶ್ರೀ ಗೋಪಾಲಕೃಷ್ಣ ರಾವ್ ಕಡಬ ಭಡ್ತಿ ಹೊಂದುತ್ತಾ ಹಿರಿಯ ಪ್ರಬಂಧಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದವರು. ಸಾಹಿತ್ಯ, ನಾಟಕ ಕಲೆಯಲ್ಲಿ ಕೂಡಾ ಆಸಕ್ತಿ ಇರುವ ಇವರು ಸ್ವಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ಸಂದರ್ಭ ಶ್ರೀ ತ್ರಿಪುರ ಸುಂದರೀ ವಿಜಯಸ್ತವಃ ಮತ್ತು ಇತರ ಸ್ತೋತ್ರಗಳನ್ನು ಅಚ್ಚು ಹಾಕಿಸಿ ಸಮಾಜ ಬಾಂಧವರಿಗೆ ನೀಡುತ್ತಿರುವುದು ಶ್ಲಾಘನೀಯ. ಶ್ರೀ ತ್ರಿಪುರ ಸುಂದರೀ ವಿಜಯಸ್ತವಃ, ಶ್ರೀಶಾರದಾ ಭುಜಂಗ ಪ್ರಯಾತಾಷ್ಟಕಂ ಮತ್ತು ಶ್ರೀದೇವ್ಯಪರಾಧ ಕ್ಷಮಾಪಣ ಸ್ತೋತ್ರಂ-ಸ್ತೋತ್ರಗಳನ್ನು ಅರ್ಥಸಹಿತ ಪ್ರಕಟಿಸಲಾಗಿದೆ. ಭಾವಾರ್ಥವನ್ನು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಬರೆದಿದ್ದಾರೆ. ಶ್ರೀದೇವ್ಯಪರಾಧ ಕ್ಷಮಾಪಣ ಸ್ತೋತ್ರಂ-ಶ್ಲೋಕ ಆರರ ಭಾವಾರ್ಥ ಹೀಗಿದೆ - ಹೇ ಅಪರ್ಣೇ, ನಿನ್ನ ಮಂತ್ರಾಕ್ಷರವು - ನಾಮವು ಕಿವಿಗೆ ಕೇಳಿದರೆ ಸಾಕು, ಅವನು ಚಾಂಡಾಲನಾದರೂ ಜೇನುತುಪ್ಪದಂತೆ ಮಧುರವಾದ ಮಾತು ಗಳನ್ನಾಡುವ ದೊಡ್ಡ ವಾಗ್ಮಿಯೇ ಆಗಿಬಿಡುತ್ತಾನೆ. ಎಂತಹ ದಟ್ಟದರಿದ್ರನಾದರೂ ಆತಂಕವಿಲ್ಲದೇ ಕೋಟ್ಯಾಧೀಶನಾದ ಶ್ರೀಮಂತನಾಗಿ ವಿಹರಿಸುತ್ತಾನೆ. ಇದು ಜಪಿಸಬೇಕಾದ ನಿನ್ನ ನಾಮಜಪದ ಫಲ. ಇದು ಯಾರಿಗೆ ಗೊತ್ತಿದೆ?

- ವೈ. ಮೋಹನರಾವ್

ಶ್ರೀಶಾರದಾ ವೇದಿಕೆಯ ಮಹಾ ಪೋಷಕರು : ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಟಾಡಿ, ಎಂ. ಸದಾನಂದ ರಾವ್ ಚಿಟ್ಟಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಕಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ